# ಎನ್‌ಐಟಿಕೆ ಪ್ರಥಮ ನಿರ್ದೇಶಕ ಪ್ರೊ. ಪಿ.ಎನ್. ಸಿಂಗ್ ನಿಧನ



**ಸುರತ್ಕಲ್:** ಎನ್‌ಐಟಿಕೆಯ ಪ್ರಥಮ ನಿರ್ದೇಶಕರಾಗಿ ನಿವೃತ್ತರಾಗಿದ್ದ ಪ್ರೊ. ಪಿ.ಎನ್. ಸಿಂಗ್(85) ಬೆಂಗಳೂರಿನ ಸ್ವಗೃಹದಲ್ಲಿ ಮಂಗಳವಾರ ನಿಧನರಾದರು.

ಮೂಲತಃ ಬಿಹಾರದವರಾಗಿದ್ದು, ಕೆಮಿಕಲ್ ಎಂಜಿನಿಯರಿಂಗ್ ಕ್ಷೇತ್ರದ ಪರಿಣಿತರಾಗಿದ್ದರು. ಅವರು ಕೆಆರ್‌ಇಸಿ ಕಾಲದಿಂದಲೂ ಸಂಸ್ಥೆಯಲ್ಲಿ ಸುದೀರ್ಘ ಸೇವೆ ಸಲ್ಲಿಸಿದ್ದರು. ಕೆಆರ್‌ಇಸಿಯು ಎನ್‌ಐಟಿಕೆಯಾದಾಗ ಮೊದಲ ನಿರ್ದೇಶಕರಾಗುವ ಅವಕಾಶ ಅವರಿಗೆ ದೊರೆತಿತ್ತು. ಅವರಿಗೆ ಪತ್ನಿ, ಪುತ್ರಿ, ಇಬ್ಬರು ಪುತ್ರರು ಇದ್ದಾರೆ.

Vijaya Karnataka, Date:13/09/23, p.no - 05